ತರುತ್ತೇನೆ. ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದೆ. ಸಿಸ್ಕಿ ಸರ್ಕಲ್ ಫ್ಲೈ ಓವರ್ ಏನಿದೆ ಅಷ್ಟು ದೊಡ್ಡ ಫ್ಲೈ ಓವರ್, it was a mistake on the part of the Corporation. ಮುಂಚೆ ಆ ಯೋಜನೆ ಮಾಡಿದ್ದೇ ತಪ್ಪು ಎನ್ನುವ ಸ್ಥಿತಿಗೆ ನಾವು ಬಂದಿದ್ದೇವೆ. ಆ ಫ್ಲೈ ಓವರ್‌ನಲ್ಲಿ ಒಂದು ಗಂಟೆಗೆ ಎಷ್ಟು ವಾಹನಗಳು ಓಡಾಡಬಹುದೆಂದು ಅಂದುಕೊಂಡಿದ್ದೆವೋ ಅದರ ಹತ್ತು ಪರ್ಸೆಂಟ್ ಕೂಡ ಓಡಾಡುತ್ತಿಲ್ಲ. ಆ ರೀತಿ ಯೋಜನೆ ಮಾಡಿದ್ದೇ ತಪ್ಪು. ಅದನ್ನು ರಾಜರಾಜೇಶ್ವರಿ ನಗರದವರೆಗೆ ಮುಂದುವರೆಸಿ ಅಂದರೆ ಆಗ ಮಾಡಿದ್ದ ತಪ್ಪನ್ನು ಮುಂದುವರೆಸಿ ಎಂದು ಹೇಳಿದಂತೆ ಆಗುವುದು.

ಛೇರ್ಮನ್: ಮಾನ್ಯ ಸಾರಿಗೆ ಸಚಿವರಲ್ಲಿ ಒಂದು ವಿಚಾರ ಕೇಳುವುದೇನೆಂದರೆ, ವೊಲ್ವೊ ಕಂಪನಿಯವರ ತರಹ ಅಶೋಕ್ ಲೇಲ್ಯಾಂಡ್‌ನವರೂ ಮಾಡುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ.ವೆಂಕಟಪ್ಪನವರು) ಪೀಠವನ್ನಲಂಕರಿಸಿದರು)

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಅಶೋಕ್ ಲೇಲ್ಯಾಂಡ್ ಮತ್ತು ಟೆಲ್ಕೊ ಕಂಪನಿಯ ಕೆಲವು ಪ್ರತಿನಿಧಿಗಳೊಂದಿಗೆ ಮಾತುಕತೆಯಾಗಿದೆ. ವೊಲ್ವೊ, ಅಶೋಕ್ ಲೇಲ್ಯಾಂಡ್ ಮತ್ತು ಟಾಟಾ ಕಂಪನಿಯ ಕೆಲವು ಪ್ರಮುಖ ಪ್ರತಿನಿಧಿಗಳು ನಮ್ಮನ್ನು ಭೇಟಿಯಾಗಿದ್ದಾರೆ. ವೊಲ್ವೊ ಬಸ್ಸುಗಳನ್ನು ಖರೀದಿಸುವಲ್ಲಿ ನಮಗಿರುವ ಆಸಕ್ತಿ ತಿಳಿದು ನಮ್ಮ ಮುಂದೆ ಬಂದು 'ನಾವೂ ಸಹ ಇದೇ ಮಾದರಿಯಲ್ಲಿ ಬಸ್ಸುಗಳನ್ನು ನಿರ್ಮಿಸುತ್ತಿದ್ದು, ಈಗಾಗಲೇ ದೆಹಲಿ ಹಾಗೂ ಮುಂಬಯಿ ನಗರಗಳಲ್ಲಿ ಸಂಚಾರಕ್ಕೆಂದು ಎರಡೆರಡು ವಾಹನಗಳನ್ನು ಒದಗಿಸಿಕೊಟ್ಟಿದ್ದು, ಬೆಂಗಳೂರು ನಗರದ ಸಂಚಾರಕ್ಕೆಂದು ಸಹ ಎರಡು ಬಸ್ಸುಗಳನ್ನು ಒದಗಿಸಿಕೊಡುತ್ತೇವೆ' ಎಂದು ಅಶೋಕ್ ಲೇಲ್ಯಾಂಡ್ ಮತ್ತು ಟಾಟಾ ಕಂಪನಿಯವರು ಚರ್ಚಿಸಿದ್ದಾರೆ. ಆದುದರಿಂದ, ಕೆಲವೇ ದಿನಗಳಲ್ಲಿ ಆ ಮಾದರಿಯಾದ ವಾಹನಗಳನ್ನು ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾವು ಅವರಲ್ಲಿ ವಿನಂತಿಸಿಕೊಂಡಿರುವ ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ.ಎಸ್.ಗುರುಸ್ವಾಮಿ: ವೊಲ್ವೊ ಹಾಗೂ ಅಶೋಕ್ ಲೇಲ್ಯಾಂಡ್ ಕಂಪನಿಯ ಬಸ್ಸುಗಳನ್ನು ಸಂಚಾರಕ್ಕೆ ಬಳಸಿಕೊಳ್ಳಲು ಸರ್ಕಾರ ಪರಿಶೀಲಿಸುತ್ತಿದೆ ಎಂದಾಯಿತು. ಸರಿ, ಧನ್ಯವಾದಗಳು.

ರಾಜ್ಯದ ಅನೇಕ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡಲಾಗುವ ಆಹಾರದ

ಗುಣಮಟ್ಟ ಮತ್ತು ಪ್ರಮಾಣ ಕಡಿಮೆ ಆಗಿರುವುದು.

307(3643)

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಕನಕಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡಲಾಗುವ ಆಹಾರದ ಗುಣಮಟ್ಟ ಮತ್ತು ಪ್ರಮಾಣ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕೆ ಕಾರಣಗಳೇನು:

ಇ) ಇದನ್ನು ಬಗೆಹರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ ಮತ್ತು ಆ) ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರದ ಪ್ರಮಾಣ ಮತ್ತು ಕೆಲವು ಕಡೆಗಳಲ್ಲಿ ಗುಣಮಟ್ಟ ಕಡಿಮೆಯಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ. ಮಾರುಕಟ್ಟೆಯಲ್ಲಿ ಆಹಾರ ಸಾಮಗ್ರಿಗಳ ಬೆಲೆಗಳಲ್ಲಿನ ಹೆಚ್ಚಳದಿಂದಾಗಿ ಅಂಗನವಾಡಿ ಕೇಂದ್ರಗಳಲ್ಲಿ ನೀಡುತ್ತಿರುವ ಆಹಾರದ ಪ್ರಮಾಣದಲ್ಲಿ ಕಡಿಮೆಯಾಗಲು ಕಾರಣವಾಗಿದೆ. ಸಾಮಗ್ರಿಗಳ ಗುಣಮಟ್ಟ ಕಡಿಮೆಯಾಗಲು ಕೆಲವು ಕಡೆಗಳಲ್ಲಿ ಕೇಂದ್ರಗಳಿಗೆ ಪಡೆದುಕೊಳ್ಳಲಾಗುತ್ತಿರುವ ಪಡಿತರ ಅಕ್ಕಿ ಉತ್ತಮ ಗುಣಮಟ್ಟವನ್ನು ಹೊಂದಿಲ್ಲದಿರುವುದು ಕಾರಣವಾಗಿದೆ.

ಇ) ಆಹಾರದ ಪ್ರಮಾಣವನ್ನು ಹೆಚ್ಚಿಸುವ ಸಲುವಾಗಿ ಫಲಾನುಭವಿಗಳಿಗೆ ಇದುವರೆಗೆ ನೀಡಲಾಗುತ್ತಿರುವ ಆಹಾರ ಸಾಮಗ್ರಿಗಳ ಮೊತ್ತವನ್ನು ರೂ. 1.25ರಿಂದ ರೂ. 1.50ಕ್ಕೆ ಈ ಸಾಲಿನಿಂದ ಹೆಚ್ಚಿಸಲಾಗುತ್ತದೆ. ಆಹಾರ ಪದಾರ್ಥಗಳ ಗುಣಮಟ್ಟದ ಸುಧಾರಣೆಗೆ ಸಂಬಂಧಿಸಿದಂತೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನೆ ಪಡೆದು ವಿತರಿಸುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಸರ್ಕಾರ ಜಾರಿ ಮಾಡಿರುವ ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರೀತ್ಯಾ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಟೆಂಡರ್ ಮೂಲಕ ಖರೀದಿಸಿ ಮಾದರಿಗಳನ್ನು ಪರಿಶೀಲಿಸಿ ಪಡೆದುಕೊಳ್ಳುವಂತೆ ಆದೇಶವನ್ನು ನೀಡಿದೆ. ಆದಾಗ್ಯೂ ಕಡಿಮೆ ಗುಣಮಟ್ಟದ ಪಡಿತರ ಅಕ್ಕಿಯನ್ನು ಪಡೆದು ಕೆಲವು ಕಡೆಗಳಲ್ಲಿ ವಿತರಿಸಿರುವುದು ಗಮನಕ್ಕೆ ಬಂದಿದ್ದು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿ ಇವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಶ್ನೆ ಕೇಳುವುದಕ್ಕೆ ಮುಖ್ಯ

ಕಾರಣವೇನೆಂದರೆ, ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತಿರುವ ಆಹಾರ ಕುರಿತಂತೆ ನಾನು ಹಲವಾರು ಜಿಲ್ಲೆಗಳಲ್ಲಿ ನೋಡಿರುವಂತೆ ಪ್ರತಿ ತಿಂಗಳು ನಿಗದಿಯಾದ ರೀತಿಯಲ್ಲಿ ವ್ಯವಸ್ಥಿತವಾಗಿ ಬರುತ್ತಿಲ್ಲ. ಆದಕಾರಣ, ಈ ಪದ್ಧತಿಯನ್ನು ಸ್ಟ್ರೀಮ್‌ಲೈನ್ ಮಾಡಲು ಸಾಧ್ಯವೇ? ಎರಡನೆಯದಾಗಿ, ಆಹಾರವನ್ನು ಸರಬರಾಜು ಮಾಡುವ ಕಾರ್ಯವನ್ನು ಆಗ್ರೋ ಕಾರ್ನ್ ಸಂಸ್ಥೆಯವರಿಗೆ ವಹಿಸಿರುವುದರಿಂದ, ಸದರಿಯವರು ಪೂರೈಸುವ ಆಹಾರ ರುಚಿಕರವಾಗಿರುವುದಿಲ್ಲ ಮತ್ತು ಅದರಲ್ಲಿನ ಇನ್‌ಗ್ರೇಡಿಯಂಟ್ಸ್ ಸರಿಯಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಮಕ್ಕಳು ಆ ಆಹಾರವನ್ನು ಬಯಸುವುದಿಲ್ಲ. ಆದುದರಿಂದ, ಇದನ್ನು ಸರಿಪಡಿಸಿ ಮಕ್ಕಳಿಗೆ ರುಚಿಕರವಾದ ಆಹಾರವನ್ನು ಪೂರೈಸುವುದಕ್ಕಾಗುವುದಿಲ್ಲವೇ? ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿಂಧ್ಯರವರು ತಿಳಿಸಿರುವ ಪ್ರಕಾರ ಅಂಗನವಾಡಿ ಕೇಂದ್ರಗಳಲ್ಲಿರುವ ಮಕ್ಕಳಿಗೆ ವಾರದಲ್ಲಿ ನಾಲ್ಕು ದಿವಸಗಳ ಕಾಲ ಪೂರೈಸಲಾಗುತ್ತಿರುವ ಪುಷ್ಟಿದಾಯಕ ಆಹಾರ ರುಚಿಕರವಾಗಿರುವುದಿಲ್ಲವೆಂದು ತಿಳಿದು ಅದನ್ನು ಬದಲಾಯಿಸಿ ಅಕ್ಕಿಯಲ್ಲಿ ತಯಾರಿಸಿದ ಸಿಹಿ ಪೊಂಗಲು, ಚಿತ್ರಾನ್ನದ ಮಾದರಿಯ ಆಹಾರ ಏತರಿಸುವುದರ ಜೊತೆಗೆ ಮೊಳಕೆ ಕಾಳುಗಳ ಉಸುಲಿಯನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು. ಪ್ರಧಾನಿ ರೋಜ್‌ಗಾರ್ ಯೋಜನೆಯಡಿ ಬಂದಿರುವ ಹಣದಲ್ಲಿ ಪ್ರತಿ ಮಗುವಿಗೆ ಒಂದು ರೂಪಾಯಿ ಇಪ್ಪತ್ತೈದು ಪೈಸೆ ಲೆಕ್ಕದಲ್ಲಿ ಆಹಾರ ಪದಾರ್ಥವನ್ನು ಏತರಿಸಲಾಗುತ್ತಿತ್ತು. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರದ ಪ್ರಮಾಣ ಸಾಕಾಗುತ್ತಿಲ್ಲವೆಂದು ತಿಳಿದು ಇಪ್ಪತ್ತೈದು ಪೈಸೆ ಜಾಸ್ತಿ ಮಾಡಿ ಈಗ ಒಂದು ರೂಪಾಯಿ ಐವತ್ತು ಪೈಸೆ ಲೆಕ್ಕದಲ್ಲಿ ಪ್ರತಿ ಮಕ್ಕಳಿಗೆ ಆಹಾರವನ್ನು ಸರಬರಾಜು ಮಾಡುತ್ತಿದ್ದೇವೆ. ಆರು ವರ್ಷದೊಳಗಿನ ಮಕ್ಕಳಿಗೆ ಅಂದರೆ ಮೂರು ವರ್ಷದೊಳಗಿರುವ ಮಕ್ಕಳಿಗೆ ವೀನಿಂಗ್ ಫುಡ್ ನೀಡುವುದು ಹಾಗೂ ಮೂರರಿಂದ ಆರು ವರ್ಷದೊಳಗಿರುವ ಮಕ್ಕಳಿಗೆ ವಾರದಲ್ಲಿ ಎರಡು ದಿವಸಗಳಲ್ಲಿ ಮೊಟ್ಟೆ ಏತರಿಸಲು ತೀರ್ಮಾನಿಸಿದ್ದು, ಇದರ ಸಿದ್ಧತೆ ನಡೆದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಂಗನವಾಡಿ ಕೇಂದ್ರಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಒಂದು ರೂಪಾಯಿ ಇಪ್ಪತ್ತೈದು ಪೈಸೆ ಲೆಕ್ಕದಲ್ಲಿ ನೀಡಲಾಗುತ್ತಿದ್ದ ಆಹಾರದ ಪ್ರಮಾಣ ಸಾಕಾಗುತ್ತಿಲ್ಲವೆಂದು ತಿಳಿದು ಇಪ್ಪತ್ತೈದು ಪೈಸೆ ಹೆಚ್ಚಿಸಿ ಒಂದು ರೂಪಾಯಿ ಐವತ್ತು ಪೈಸೆ ಲೆಕ್ಕದಲ್ಲಿ ಆಹಾರ ಪೂರೈಸುತ್ತಿರುವುದು ಸರ್ಕಾರದ ಸರಿಯಾದ ಕ್ರಮವಾಗಿದೆ. ಆದರೆ, ವಾಸ್ತವವಾಗಿರುವ ವಿಚಾರವೇನೆಂದರೆ, ಮಕ್ಕಳಿಗೆ ಆಹಾರ ಒದಗಿಸಿಕೊಡುವ ಕೆಲಸವನ್ನು ತಾವು ಆಗ್ರೋ ಕಾರ್ನ್ ಸಂಸ್ಥೆಗೆ ವಹಿಸಿಕೊಟ್ಟದ್ದು, ಇದರ ಗುತ್ತಿಗೆ ಇನ್ನು 2-3 ವರ್ಷಗಳ ಕಾಲದವರೆಗೆ ಇದೆಯೆಂದು ಕಾಣುತ್ತದೆ. ಇವರಿಗೆ ಮುಂಗಡ ಹಣವನ್ನೂ ಸಹ ನೀಡಿರುವುದರಿಂದ ಜಿಲ್ಲಾ ಪರಿಷತ್‌ನವರು

ಏನು ಮಾಡುತ್ತಾರೆಂದು ನಮಗೆ ಗೊತ್ತಾಗುತ್ತಿಲ್ಲ. ಹೀಗಾಗಿ, ಒಟ್ಟಿನಲ್ಲಿ ಬಳಲುವವರು ಈ ಎಳೆಯ ಮಕ್ಕಳು. ಎಳೆಯ ಮಕ್ಕಳಿಗೆ ಪ್ರತಿನಿಧಿಸಲು ಅವಕಾಶ ಇಲ್ಲದಿರುವುದರಿಂದ ವ್ಯವಸ್ಥೆಯನ್ನು ಫ್ರೀಮ್ ಲೈನ್ ಮಾಡಲು ಸಾಧ್ಯವಿಲ್ಲವೇ?

ಶ್ರೀಮತಿ ಮೋಟಮ್ಮ: ಆಗ್ರೋ ಕಾರ್ನ್ ಸಂಸ್ಥೆಯವರು ವಾರದಲ್ಲಿ ನಾಲ್ಕು ದಿವಸಗಳ ಕಾಲ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಪುಷ್ಟಿದಾಯಕ ಆಹಾರವನ್ನು ಪೂರೈಸುತ್ತಿದ್ದುದನ್ನು ಕಡಿತಗೊಳಿಸಿ ಎರಡು ದಿನಸಗಳಿಗೆ ಮಾತ್ರ ಪೂರೈಸುವಂತೆ ಕ್ರಮ ಕೈಗೊಂಡಿದ್ದೇವೆ. ಅದು ಪೌಷ್ಟಿದಾಯಕ ಆಹಾರವಾದುದರಿಂದ ಅದನ್ನು ನಿಲ್ಲಿಸುವಂತಿಲ್ಲ. ಆಹಾರವನ್ನು ಪೂರೈಸಲು ಸದರಿ ಸಂಸ್ಥೆಯವರ ಹೊರತಾಗಿ ಬೇರೆಯವರು ಪೂರೈಸುವ ಕುರಿತು ನಾವು ಇನ್ನೂ ವಿಚಾರ ಮಾಡಿಲ್ಲ. ಸಂಸ್ಥೆಯವರ ಗುತ್ತಿಗೆ 2002ನೇ ಇಸವಿವರೆಗೆ ಇರುವುದರಿಂದ ವ್ಯವಸ್ಥೆಯನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ. ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ರೀತ್ಯಾ ಮುಂದೆ ಈ ಕುರಿತು ಟೆಂಡರ್‌ಗಳನ್ನು ಆಹ್ವಾನಿಸಿದಾಗ ಬೇರೆಯವರು ಭಾಗವಹಿಸಿ ಸದರಿಯವರಿಗಿಂತ ಉತ್ತಮ ಗುಣಮಟ್ಟದ ಪೌಷ್ಟಿಕ, ರುಚಿಕರವಾದ ಆಹಾರ ಪೂರೈಸುತ್ತೇವೆಂದರೆ ಆಗ ವಿಚಾರ ಮಾಡಬಹುದಾಗಿದೆ. ಈಗಿರುವ ಪದ್ಧತಿಯಲ್ಲಿ ವಾರದಲ್ಲಿ ನಾಲ್ಕು ದಿವಸಗಳಿಗೆ ಪೂರೈಸುತ್ತಿದ್ದ ಆಹಾರವನ್ನು ಎರಡು ದಿವಸಗಳಿಗೆ ಮಾತ್ರ ಪೂರೈಸುವ ವ್ಯವಸ್ಥೆ ಮಾಡಿದ್ದೇವೆ. ನಾನು ಈಗಾಗಲೇ ತಿಳಿಸಿದಂತೆ ಮಕ್ಕಳಿಗೆ ಸಿಹಿ ಪೊಂಗಲು, ಚಿತ್ರಾನ್ನ ಮಾದರಿಯ ಆಹಾರ ಹಾಗೂ ಮೊಳಕೆ ಕಾಳುಗಳ ಉಸುಲಿ ಆಹಾರ ಸರಬರಾಜು ಮಾಡುತ್ತಿದ್ದೇವೆ ಜೊತೆಗೆ ಮೊಟ್ಟೆಯನ್ನು ಕೊಡುತ್ತಿದ್ದೇವೆ. ಮಕ್ಕಳಿಗೆ ಒದಗಿಸಲಾಗುತ್ತಿರುವ ಪುಷ್ಟಿದಾಯಕ ಆಹಾರವನ್ನು ನಿಲ್ಲಿಸಲು ಸಾಧ್ಯವಿಲ್ಲ. ಏಕೆಂದರೆ, ಮಕ್ಕಳ ದೈಹಿಕ ಬೆಳವಣಿಗೆಗೆ ಸೇವಿಸುವ ಆಹಾರದಲ್ಲಿ 300 ಗ್ರಾಮ್‌ನಷ್ಟು ಕ್ಯಾಲೋರಿ ಹಾಗೂ ಶೇಕಡ 8-10ರಷ್ಟು ಪ್ರೋಟನ್ ಅಂಶ ಇರಬೇಕಾಗುತ್ತದಾದ್ದರಿಂದ ಆಹಾರದ ಪದ್ಧತಿಯನ್ನು ಸುಧಾರಿಸಿ ಉತ್ತಮ ಗುಣಮಟ್ಟದ ಆಹಾರವನ್ನು ಮಕ್ಕಳಿಗೆ ಪೂರೈಸಲು ಪ್ರಯತ್ನಿಸಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿರುವ ಶ್ರೀಮತಿ ಮೋಟಮ್ಮನವರು ಮಂತ್ರಿಗಳಾದ ಬಳಿಕ ಉದ್ಭವಿಸಿದ ಸಮಸ್ಯೆ ಇದಲ್ಲ. ಈ ಸಮಸ್ಯೆ ಕಳೆದ 7-8 ವರ್ಷಗಳಿಂದಲೂ ಹೀಗೆಯೇ ಇದೆ. ಮಕ್ಕಳಿಗೆ ಬೇರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗಲೂ ನಾನು ಈ ಕುರಿತು ಪ್ರಶ್ನೆ ಕೇಳಿದ್ದೆ. ಅನೇಕ ಮಾನ್ಯ ಶಾಸಕರುಗಳಿಗೆ ತಿಳಿದಿರುವಂತೆ, ಅಂಗನವಾಡಿ ಕಾರ್ಯಕರ್ತೆಯರ ಗೋಳು ಏನಿದೆಯೆಂದರೆ, ಆ ಊರುಗಳಲ್ಲಿ ಅಡಿಗೆ ಮಾಡಲು ಸೌದೆಯನ್ನು ಯಾರೂ ತಂದು ಕೊಡುವುದಿಲ್ಲ. ಗ್ರಾಮ ಪಂಚಾಯಿತಿಯವರೇ ಇದನ್ನು ಒದಗಿಸಿಕೊಡಬೇಕು. ಮತ್ತೊಂದು ವಿಚಾರವೇನೆಂದರೆ, ಅಂಗನವಾಡಿ ಕೇಂದ್ರಗಳಲ್ಲಿ ಪ್ರತಿನಿತ್ಯವೂ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದು ತೋಚಿನೀಯ ಸಂಗತಿ. ಹಾಗೆಂದು ಜನಸಂಖ್ಯೆ ಪ್ರಮಾಣ ಕಡಿಮೆಯಾಗಿಲ್ಲ. ಅಂಗನವಾಡಿ

ಕೇಂದ್ರಗಳಿಗೆ ಬರುವ ಮಕ್ಕಳು ಸ್ವಚ್ಛ ಬಟ್ಟೆ ಹಾಕಿಕೊಂಡಿರುವುದಿಲ್ಲ, ಊಟ-ತಿಂಡಿ ಗಲೀಜಾಗಿರುತ್ತದೆಂದು ಭಾವಿಸಿ ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸಲು ತಂದೆತಾಯಿಗಳು ಅಸಹ್ಯಪಡುತ್ತಾರೆ. ಇದು ಕ್ರಮಬದ್ಧವಾಗಿರಬೇಕು. ಆಗ್ರೋ ಕಾರ್ನ್ ಸಂಸ್ಥೆಯೊಂದಿಗೆ 2002ನೇ ಸಾಲಿನವರೆಗೆ ಗುತ್ತಿಗೆ ಕರಾರು ಮಾಡಿಕೊಂಡಿರುವುದರಿಂದ ಒದಗಿಸಲಾಗುತ್ತಿರುವ ಆಹಾರದಲ್ಲಿ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳಾಗಿರುವ ನೀವು ಹೆದರಿಕೊಳ್ಳುವ ಅವಶ್ಯಕತೆಯಿಲ್ಲ. ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರೀತ್ಯ ಮಕ್ಕಳಿಗೆ ಆಹಾರ ಪೂರೈಸಲು ಟೆಂಡರ್‌ಗಳನ್ನು ಆಹ್ವಾನಿಸುವುದು ಹಾಗೂ ಆಯ್ಕೆಯಾದ ಸಂಸ್ಥೆಗೆ ಗುತ್ತಿಗೆ ವಹಿಸಿಕೊಡುವುದು, ಈ ವಿಧಿ-ವಿಧಾನಗಳೆಲ್ಲವೂ ಇರುವುದರಿಂದ ಇದನ್ನು ಬಿಟ್ಟು ತಾವು ಕ್ರಮ ಕೈಗೊಳ್ಳಬೇಕೆಂದು ಹೇಳುವುದಿಲ್ಲ. ನಾವು ವಾರದಲ್ಲಿ 5-6 ದಿವಸಗಳ ಕಾಲ ಅಂಗನವಾಡಿ ಕೇಂದ್ರಗಳನ್ನು ನಡೆಸುತ್ತಿದ್ದು, ಮಕ್ಕಳಿಗೆ ಒದಗಿಸಲಾಗುತ್ತಿರುವ ಆಹಾರದ ಪ್ರಮಾಣ ಕಡಿಮೆಯಾದರೂ ಪರವಾಗಿಲ್ಲ, ಆಹಾರ ರುಚಿಕರವಾಗಿರಬೇಕು ಹಾಗೂ ಕೇಂದ್ರಗಳಲ್ಲಿ ವಾತಾವರಣ ಚೆನ್ನಾಗಿರಬೇಕು. ಇದಕ್ಕೆ ತಾವು ಕ್ರಮ ಕೈಗೊಳ್ಳಬೇಕು. ಅಲ್ಲದೆ, ಈಗ ಅಂಗನವಾಡಿ ಕಾರ್ಯಕರ್ತೆಯವರಿಗೆ 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಅನುಷ್ಠಾನ ಜವಾಬ್ದಾರಿ ಅವರಿಗೆ ವಹಿಸಿಕೊಟ್ಟಿರುವುದರಿಂದ ಹಳ್ಳಿ-ಹಳ್ಳಿಗೂ ತಿರುಗಾಡಬೇಕು. ಅವರಿಗೆ ಹಳ್ಳಿಯಿಂದ ಹಳ್ಳಿಗೆ ಸಂಚರಿಸಲು ಸೈಕಲ್ ಒದಗಿಸಿಕೊಟ್ಟಿದ್ದೇವೆಯೇ? ಅದಕ್ಕಾಗಿ ಬಸ್ ಪ್ರಯಾಣ ದರವನ್ನು ಕೊಡುತ್ತೇವೆಯೇ? ಅವರಿಗೆ 500-600 ರೂಪಾಯಿಗಳ ಸಂಬಳ ಒದಗಿಸಿಕೊಡುತ್ತಿದ್ದು, ಅವರ ಸಂಭಾವನಾ ಮೊತ್ತವನ್ನು ಜಾಸ್ತಿಗೊಳಿಸಬೇಕೆಂದು ಮೊನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಒತ್ತಾಯಿಸಿದಾಗ ಸಧ್ಯಕ್ಕೆ ಸರ್ಕಾರದಲ್ಲಿ ಹಣವಿಲ್ಲದಿರುವುದರಿಂದ ಪರಿಶೀಲಿಸುವುದಾಗಿ ತಿಳಿಸಿದ್ದಾರೆ. 'ಸ್ತ್ರೀ ಶಕ್ತಿ'ಯಂತಹ ಕಾರ್ಯಕ್ರಮಕ್ಕೆ ಸರ್ಕಾರದಲ್ಲಿ ಹಣವಿಲ್ಲವೆಂದರೆ ಏನರ್ಥ? ಮಹಿಳೆಯರು ತಮ್ಮಲ್ಲಿರುವ ಹಣವನ್ನು ತಾವೇ ಉಳಿಸಿಕೊಳ್ಳುವಂಥ ಇದೊಂದು ಸೆಲ್ಫ್ ಹೆಲ್ಪ್ ಗ್ರೂಪ್ ಕಾರ್ಯಕ್ರಮವಾಗಿದ್ದು ಸರ್ಕಾರದ ಪಾಲೇನೂ ಇದರಲ್ಲಿಲ್ಲ. ಆದರೆ, ಯೋಜನೆಯ ಅನುಷ್ಠಾನದ ಲಾಭ ಮಾತ್ರ ಸರ್ಕಾರಕ್ಕೆ ಬೇಕು! ಸರ್ಕಾರ ಕಾಸು ಮಾತ್ರ ಕೊಡುವುದಿಲ್ಲವೆಂದರೆ ಏನರ್ಥ? ಆದುದರಿಂದ, ನಾನು ಕೇಳುತ್ತಿರುವುದೇನೆಂದರೆ, ಮಾನ್ಯ ಸಚಿವರಾದ ತಾವು ದಿಟ್ಟತನ ಪ್ರದರ್ಶಿಸಿ ಪದ್ಧತಿಯನ್ನು ಸ್ಟ್ರೀಮ್‌ಲೈನ್ ಮಾಡುವುದಕ್ಕೆ ಕಠಿಣವಾದ ನಿರ್ಧಾರವನ್ನು ಕೈಗೊಳ್ಳಬೇಕು. ತಾವು ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳ ಹಾಗೂ ಜಿಲ್ಲಾಮಟ್ಟದ ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆದು ಒಂದು ಮೆಕ್ಯಾನಿಸಂ ಅನ್ನು ವರ್ಕ್-ಅಪ್ ಮಾಡಿ ನವೆಂಬರ್ ಒಂದನೇ ತಾರೀಖಿನೊಳಗಾಗಿ ಕಾರ್ಯರೂಪಕ್ಕೆ ತರಲೇಬೇಕೆಂದು ನಿರ್ದಾಕ್ಷಿಣ್ಯವಾಗಿ ಹೇಳುವ ಮೂಲಕ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳದೆ ಹೋದರೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಒಟ್ಟಾರೆ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತದಲ್ಲದೆ, ಬಡವರ ಮಕ್ಕಳಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟನಲ್ಲಿ ಯಾವ ಘನ ಉದ್ದೇಶ ಹೊತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಷ್ಠಾನಗೊಳಿಸುತ್ತಿರುವ ಈ ಕಾರ್ಯಕ್ರಮ ಸಫಲವಾಗುವುದಿಲ್ಲ.

ಶ್ರೀಮತಿ ಮೋಟಮ್ಮ: ತಾವು ಈ ಹಿಂದೆ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಈ ಖಾತೆಯನ್ನು ನಿರ್ವಹಿಸಿರುವುದಲ್ಲದೆ, ತಮ್ಮ ನಂತರ ಅನೇಕ ಮಂತ್ರಿಗಳು ಸದರಿ ಖಾತೆಯನ್ನು ನಿರ್ವಹಿಸಿ ಹೋಗಿರುತ್ತಾರೆ. ನನಗೆ ಈ ಖಾತೆ ಸಿಕ್ಕಿದ ಬಳಿಕ ಅಂಗನವಾಡಿ ಕೇಂದ್ರಗಳನ್ನು ಉತ್ತಮಗೊಳಿಸಿ ಅಲ್ಲಿಗೆ ಕಲಿಯಲು ಬರುವ ಬಡ ಮಕ್ಕಳಿಗೆ ಒಳ್ಳೆಯ ಆಹಾರ ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ವಿಷಯವನ್ನು ಪ್ರಸ್ತಾಪಿಸಿದ್ದರಿಂದ ಒಂದು ರೂಪಾಯಿ ಇಪ್ಪತ್ತೈದು ಪೈಸೆ ಲೆಕ್ಕದಲ್ಲಿ ಪ್ರತಿ ಮಗುವಿಗೆ ಏನು ಆಹಾರ ಒದಗಿಸಿಕೊಡಲಾಗುತ್ತಿತ್ತು, ಅದು ಸಾಕಾಗುವುದಿಲ್ಲವೆಂದು ತಿಳಿದು, ಇಪ್ಪತ್ತೈದು ಪೈಸೆಯನ್ನು ಹೆಚ್ಚು ಮಾಡಿದ್ದರಿಂದ ಪ್ರತಿ ಮಗುವಿಗೆ ಒಂದು ರೂಪಾಯಿ ಐವತ್ತು ಪೈಸೆ ಲೆಕ್ಕದಲ್ಲಿ ಹೆಸರುಕಾಳು ಮೊಳಕೆ ಇರಬಹುದು, ಕಡಲೆಕಾಳಿನ ಮೊಳಕೆ ಇರಬಹುದು, ಇಂತಹ ಆಹಾರವನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ತಾವು ಹೇಳಿದ ರೀತಿಯಲ್ಲಿ ಒಂದು ರೂಪಾಯಿ ಇಪ್ಪತ್ತೈದು ಪೈಸೆ ಲೆಕ್ಕದಲ್ಲಿ ಮಕ್ಕಳಿಗೆ ಯಾವ ಪ್ರಮಾಣದಲ್ಲಿ ಆಹಾರವನ್ನು ಒದಗಿಸಬೇಕೋ ಆ ಪ್ರಮಾಣದಲ್ಲಿ ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ತಾವು ಭಾವಿಸಿರುವಂತೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಅಷ್ಟು ಕೆಟ್ಟದ್ದಾಗಿ ಆಹಾರವನ್ನು ಪೂರೈಸುತ್ತಿಲ್ಲ. ಅಲ್ಯೂಮಿನಿಯಂ ತಟ್ಟೆಗಳನ್ನು ಪೂರೈಸಿ ಬಹಳಷ್ಟು ವರ್ಷಗಳಾಗಿದ್ದುದರಿಂದ ಅದನ್ನು ಬದಲಾಯಿಸಿ ಹೊಸ ತಟ್ಟೆಗಳನ್ನು ಖರೀದಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಮನವೊಲಿಸಿದಾಗ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ. ಆದುದರಿಂದ, ರಾಜ್ಯದ ಯಾವ್ಯಾವ ಅಂಗನವಾಡಿ ಕೇಂದ್ರಗಳಲ್ಲಿ ತಟ್ಟೆಗಳು, ಟಂಬ್ಲರ್‌ಗಳು ಹಾಗೂ ಕುಡಿಯುವ ನೀರಿಗೆ ಡ್ರಮ್‌ಗಳ ಅಗತ್ಯವಿದೆಯೋ ಇವುಗಳನ್ನು ಜಿಲ್ಲಾ ಮಟ್ಟದಲ್ಲಿರುವ ಅಧಿಕಾರಿಗಳು ಖರೀದಿಸಿ ಕೇಂದ್ರಗಳಿಗೆ ಪೂರೈಸುವಂತೆ ವ್ಯವಸ್ಥೆ ಮಾಡಲಾಗಿದೆ. ಕೇಂದ್ರಗಳಿಗೆ ಬರುವ ಮಕ್ಕಳಿಗೆ ಬರೀ ತಿಂಡಿ ಪೂರೈಸಿ ಹಾಡು ಹೇಳಿ ಕಳುಹಿಸಿದರೆ ಸಾಲದೆಂದು ತಿಳಿದು ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಮಕ್ಕಳಿಗೆ ಶಿಕ್ಷಣದ ಅಂಶವನ್ನು ತಿಳಿಸಲು ಅಕ್ಷರ ಮಾಲೆಯುಳ್ಳ ಪಟ್ಟಿ ಹಾಗೂ ಆಟಿಕೆ ಸಾಮಾನುಗಳನ್ನು ಒದಗಿಸಿಕೊಡುತ್ತಿದ್ದೇವೆ. ಅಂಗನವಾಡಿ ಕೇಂದ್ರಗಳನ್ನು ಇನ್ನು ಯಾವ ರೀತಿ ಉತ್ತಮಪಡಿಸಬೇಕೆಂದು ತಾವು ಹೇಳಿದರೆ ನಾವು ಖಂಡಿತವಾಗಿಯೂ ಆ ಕುರಿತು ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ನೀವೇಳಿದಂತೆ ಸದರಿ ಕೇಂದ್ರಗಳು ಅಷ್ಟೇನೂ ಕೆಟ್ಟದ್ದಾಗಿ ನಡೆಯುತ್ತಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಂಗನವಾಡಿ ಕೇಂದ್ರಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಒದಗಿಸುತ್ತಿರುವ ಆಹಾರದ ಜೊತೆಗೆ ಮೊಟ್ಟೆ ಸೇರಿಸಿರುವುದು ಹಾಗೂ ತಟ್ಟೆಗಳನ್ನು ಬದಲಾಯಿಸಲು ಕೈಗೊಂಡಿರುವ ಕ್ರಮವನ್ನು ನಾವು ಸ್ವಾಗತಿಸುತ್ತೇವೆ. ರಾಜ್ಯದ ಅನೇಕ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದಂಥ ಸಂದರ್ಭದಲ್ಲಿ ನಮಗೆ ಕಂಡುಬಂದಿರುವ ವಾಸ್ತವ ಸಮಸ್ಯೆಗಳೇನೆಂದರೆ ಅಲ್ಲಿ ಆಹಾರ ಸಿದ್ಧಪಡಿಸುವುದಕ್ಕೆ ಸೌದೆ ಒಳಗೊಂಡಂತೆ ಮೂಲ ಸೌಕರ್ಯಗಳಿರುವುದಿಲ್ಲ. ಅಂಗನವಾಡಿ ಕಾರ್ಯಕರ್ತೆಯರಿಗೆ ತಿಂಗಳಿಗೆ 500-600

ರೂಪಾಯಿಗಳ ಸಂಬಳ ಹಾಗೂ ಸಹಾಯಕಿಯರಿಗೆ 100-150 ರೂಪಾಯಿಗಳ ಸಂಭಾವನೆ ನೀಡಲಾಗುತ್ತಿದ್ದು, ಇದರಿಂದ ಅವರು ಹೇಗೆ ಮಕ್ಕಳಿಗೆ ಆಹಾರ ಸಿದ್ಧಪಡಿಸಿಕೊಡಲು ಸಾಧ್ಯವಾಗುತ್ತದೆ? ನಾನು ಈ ಇಲಾಖೆಯನ್ನು ಸ್ವತಃ ನಿರ್ವಹಿಸಿರುವುದರಿಂದ ನನಗಾಗಿರುವ ಅನುಭವದ ಆಧಾರದ ಮೇಲೆ ತಮಗೆ ಸಲಹೆ ನೀಡುತ್ತಿದ್ದೇನೆ. ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆಯಡಿ ಬಂದಿರುವ ಹಣದಲ್ಲಿ ಅವರಿಗೆ ಫ್ಯೂಯೆಲ್ ಚಾರ್ಜ್ ಕೊಡಿ. ಹಾಗೂ 'ಸ್ತ್ರೀ ಶಕ್ತಿ' ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿರುವುದರಿಂದ ಇದೇ ಮಟ್ಟವನ್ನು ತಾವು ಕಾಯ್ದುಕೊಂಡು ಹೋಗಬೇಕಾಗುತ್ತದೆ. ಸದರಿ ಕಾರ್ಯಕ್ರಮದ ಸಂಚಾಲಕರು ಅಂಗನವಾಡಿ ಕಾರ್ಯಕರ್ತೆಯರಾಗಿರುವುದರಿಂದ ಅವರಿಗೆ ನೀಡಲಾಗುತ್ತಿರುವ ಸಂಭಾವನೆಯಲ್ಲಿ 100-150 ರೂಪಾಯಿಗಳನ್ನು ಜಾಸ್ತಿ ಮಾಡಲಾಗಿದೆಯೆಂದು ಹೇಳಬೇಡಿ ಯಾವುದಾದರೊಂದು ರೂಪದಲ್ಲಿ ಅವರಿಗೆ ಸೌಲಭ್ಯ ಕಲ್ಪಿಸಿಕೊಡದೆ ಹೋದರೆ ಗುಣಮಟ್ಟ ಎಲ್ಲಿ ಉಳಿಯಲು ಸಾಧ್ಯ ಎಂದು ಕೇಳುತ್ತಿದ್ದೇನೆ.

ಶ್ರೀಮತಿ ಮೋಟಮ್ಮ: ಮಕ್ಕಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ಸಿದ್ಧಪಡಿಸಲು ಗ್ರಾಮ ಪಂಚಾಯಿತಿ ಸೌದೆಯನ್ನು ಒದಗಿಸುತ್ತಿತ್ತು. ಈಗ ಸೌದೆಯನ್ನು ಖರೀದಿಸಲು ಇದಕ್ಕಾಗುವ ವೆಚ್ಚವನ್ನು ಕಾರ್ಯಕರ್ತೆಯವರಿಗೆ ನೀಡುವ ಸಂಬಳದ ಜೊತೆಯಲ್ಲಿಯೇ ಕೊಡುತ್ತಿರುವುದರಿಂದ, ಅವರು ಇನ್ನು ಮುಂದೆ ಸೌದೆಗಾಗಿ ಗ್ರಾಮ ಪಂಚಾಯಿತಿಯನ್ನು ಅವಲಂಬಿಸುವಂತಿಲ್ಲ. ಎಷ್ಟೋ ವೇಳೆ ಗ್ರಾಮ ಪಂಚಾಯಿತಿಯವರು ಸರ್ಕಾರದಿಂದ ಸೌದೆ ಒದಗಿಸಲು ಹಣ ತೆಗೆದುಕೊಂಡರೂ ಪೂರೈಸುತ್ತಿರಲಿಲ್ಲ. ಸೌದೆಯನ್ನು ತಾವೇ ಖರೀದಿಸುವುದರಿಂದ ಇದಕ್ಕಾಗುವ ವೆಚ್ಚದ ಹಣವನ್ನು ಸಂಬಳದ ಜೊತೆಗೆ ನೀಡಬೇಕೆಂದು ಕೇಳಿಕೊಂಡಿದ್ದರಿಂದ ಸೌದೆ ಖರೀದಿಗೆ ತಗಲುವ ಎಪ್ಪತ್ತೈದು ರೂಪಾಯಿಗಳನ್ನು ಅವರಿಗೆ ಸಂಬಳದ ಜೊತೆಗೆ ನೀಡುತ್ತಿದ್ದೇವೆ. ಇನ್ನು ಕೆಲವು ಪಟ್ಟಣಗಳಲ್ಲಿ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದರಿಂದ, ಸ್ವಂತ ಕಟ್ಟಡದಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸಬೇಕೆಂಬ ಉದ್ದೇಶದಿಂದ ಕಳೆದ ವರ್ಷದ ಆಯವ್ಯಯದ ಪೂರಕ ಅಂದಾಜಿನಲ್ಲಿ ಸುಮಾರು ಐದು ಕೋಟಿ ರೂಪಾಯಿಗಳಷ್ಟು ಹಣವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಿಸಿದ ನಂತರ, ಮೂರು ಕೋಟಿ ರೂಪಾಯಿಗಳನ್ನು ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಿಸಲು ಮೀಸಲಾಗಿಟ್ಟಿದ್ದರೂ ಯಾವುದೇ ಜಿಲ್ಲಾ ಪಂಚಾಯತ್‌ನವರು ಖರ್ಚು ಮಾಡಲಿಲ್ಲ. ಹಣ ಖರ್ಚು ಮಾಡಿದ ಬಗ್ಗೆ ಯುಟಿಲೈಜೇಷನ್ ಸರ್ಟಿಫಿಕೇಟ್ ಬಾರದ ಕಾರಣ ಮೀಸಲಿಟ್ಟಿದ್ದ ಐದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಲ್ಲ. ಈ ಹಿಂದೆ ಅಂಗನವಾಡಿ ಕೇಂದ್ರದ ಕಟ್ಟಡಗಳನ್ನು ನಿರ್ಮಿಸಲು ಜಿಲ್ಲಾ ಪರಿಷತ್ ಶೇಕಡ 50ರಷ್ಟು ಹಣ ಹಾಗೂ ಇಲಾಖೆಯು ಶೇಕಡ 50ರಷ್ಟು ಹಣ ನೀಡಬೇಕಾಗಿತ್ತು. ರಾಜ್ಯದಲ್ಲಿ ಸುಮಾರು 5000 ಅಂಗನವಾಡಿ ಕೇಂದ್ರಗಳ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದ ಮೀಸಲಾಗಿಟ್ಟಿದ್ದ ಐದು ಕೋಟಿ ರೂಪಾಯಿಗಳಲ್ಲಿ ಶೇಕಡ 50ರಷ್ಟು ಮ್ಯಾಚಿಂಗ್ ಗ್ರಾಂಟ್ ಇರದೆ ಸಂಪೂರ್ಣ

ಅನುದಾನವಾಗಿರುತ್ತದೆ. ಒಂದು ಅಂಗನವಾಡಿ ಕೇಂದ್ರ ನಿರ್ಮಿಸಲು ಒಂದು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳೆಂದು ಲೆಕ್ಕ ಹಾಕಲಾಗಿದೆ. ಈ ರೀತಿ ನಾವು ನೀಡಿರುವ ಹಣವನ್ನು ಜಿಲ್ಲಾ ಪರಿಷತ್‌ನವರು ಖರ್ಚು ಮಾಡಿಲ್ಲದಿರುವುದರಿಂದ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ, ದೇವಸ್ಥಾನದಲ್ಲಿ ಹಾಗೂ ಚಾವಡಿಗಳಲ್ಲಿ ಜರುಗುತ್ತಿವೆ. ಕೇಂದ್ರಗಳನ್ನು ನಿರ್ಮಿಸಲು ಹುಡ್ಕೋ ಸಂಸ್ಥೆಯಿಂದ ಸಾಲ ಸೌಲಭ್ಯ ಪಡೆಯುವ ನಿಮಿತ್ತ ಅವರನ್ನು ಸಂಪರ್ಕಿಸಲಾಗಿದ್ದು ಅವರು ಹಣಕಾಸಿನ ಸೌಲಭ್ಯ ಒದಗಿಸಿದರೆ ಕೇಂದ್ರಗಳನ್ನು ಕಟ್ಟಿಸುವ ಕ್ರಮ ಕೈಗೊಳ್ಳಲಾಗುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕಾಗಿರುತ್ತದೆ. ಏಕೆಂದರೆ, ನಗರದಲ್ಲಿ ಕಲಿಯುವ ನರ್ಸರಿ ಮಕ್ಕಳಿಗೆ ಒಂದು ಸ್ಟ್ಯಾಂಡರ್ಡ್ ಇದ್ದು, ಅಂಗನವಾಡಿಗಳಿಗೆ ಪ್ರೈಮರಿ ಶಿಕ್ಷಣಕ್ಕಾಗಿ ಬರುವ ಮಕ್ಕಳಿಗೆ ಮೂಲಭೂತ ವ್ಯವಸ್ಥೆ ಮಾಡಿಕೊಡದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕೋಸ್ಕರ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡುವಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದು, ಅವರು ಒಪ್ಪಿಕೊಂಡಿದ್ದಾರೆ. ಇನ್ನು ತಾವು ತಿಳಿಸಿರುವಂತೆ ಅಂಗನವಾಡಿ ಶಿಕ್ಷಕಿಯರಿಗೆ ಸಂಬಳ ಬಹಳ ಕಡಿಮೆ ಇದೆ. 'ಸ್ತ್ರೀ ಶಕ್ತಿ' ಕಾರ್ಯಕ್ರಮ ಅನುಷ್ಠಾನಗೊಳಿಸಲು ಒಬ್ಬ ಶಿಕ್ಷಕಿಗೆ ಪ್ರತಿ ತಿಂಗಳಿಗೆ ಐವತ್ತು ರೂಪಾಯಿಗಳನ್ನು ನೀಡಲಾಗುತ್ತಿದೆ. ಇದೊಂದು ಗ್ರಂಥಿನ ವ್ಯವಸ್ಥೆಯಾಗಿದ್ದು, ಒಂದು ಗುಂಪನ್ನು ನೋಡಿಕೊಂಡರೆ ಐವತ್ತು ರೂಪಾಯಿ, ಅದೇ ರೀತಿ ಮೂರು ಮತ್ತು ನಾಲ್ಕು ಗುಂಪನ್ನು ನೋಡಿಕೊಂಡರೆ ಕ್ರಮವಾಗಿ ನೂರೈವತ್ತು, ಇನ್ನೂರು ರೂಪಾಯಿಗಳ ಇನ್‌ಸೆಂಟೀವ್ ನೀಡಲಾಗುತ್ತದೆ. ಗುಂಪನ್ನು ಅವರು ಆರು ತಿಂಗಳವರೆಗೆ ನೋಡಿಕೊಳ್ಳಬೇಕಾಗುತ್ತದೆ. ಅಂಗನವಾಡಿ ಕೇಂದ್ರಗಳು ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳು ತುಂಬಿದ ಸುಸಂದರ್ಭದಲ್ಲಿ ಭಾರತ ಸರ್ಕಾರವು ಐ.ಸಿ.ಡಿ.ಎಸ್. ಸಿಲ್ವರ್ ಜ್ಯೂಬಿಲಿ ಆಚರಣೆ ಮಹೋತ್ಸವ ಮಾಡಿದಂಥ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ನಯಾ ಪೈಸೆಯಷ್ಟು ಕೊಡುಗೆಯನ್ನು ಪ್ರಕಟಿಸಲಿಲ್ಲ. ಭಾರತ ಸರ್ಕಾರವು ಏನಾದರೂ ಕೊಡುಗೆ ನೀಡುವುದಾಗಿ ಪ್ರಕಟಿಸಿ, ಉಳಿದದ್ದನ್ನು ರಾಜ್ಯ ಸರ್ಕಾರ ಭರಿಸಬೇಕೆಂದು ಹೇಳಿದ್ದರೆ ನಾವೂ ಕೊಡುತ್ತಿದ್ದೆವು. ಹೀಗೆ ಮಾಡಿದ್ದರೆ ಅಂಗನವಾಡಿ ಕಾರ್ಯಕರ್ತೆಯರಿಗೆ ತುಂಬಾ ಅನುಕೂಲವಾಗುತ್ತಿತ್ತು. ಇದಕ್ಕೆ ಕೇಂದ್ರ ಸರ್ಕಾರವೇ ಮುಂದೆ ಬರಲಿಲ್ಲ. ನನಗೆ ದುಃಖವಾಗುವ ಸಂಗತಿಯೇನೆಂದರೆ, ಇಲಾಖೆಯ ಸಮ್ಮೇಳನಕ್ಕೆ ಕೇಂದ್ರಕ್ಕೆ ಹೋದಂಥ ಸಂದರ್ಭದಲ್ಲಿ ಕೇಂದ್ರದ ಮಂತ್ರಿಗಳಾದ ಮುರಳಿ ಮನೋಹರ ಜೋಷಿಯವರನ್ನು ಕಂಡು ಭೇಟಿಯಾಗಿ ಅಂಗನವಾಡಿ ಕಾರ್ಯಕರ್ತೆಯರ ಸಂಭಾವನಾ ಹಣವನ್ನು ಹೆಚ್ಚು ಮಾಡಬೇಕೆಂದು ಎಲ್ಲಾ ರಾಜ್ಯಗಳ ಮಂತ್ರಿಗಳು ಒತ್ತಾಯಿಸಿದಾಗ ಅವರು They are not Govt. Employees. They are just like our party workers ಎಂದರು. ಇದನ್ನು ಕೇಳಿ ನನಗೆ ನೋವುಂಟಾಯಿತು. ಆದುರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ 'ಅವರ ಸಂಭಾವನಾ ಮೊತ್ತವನ್ನು ಜಾಸ್ತಿ ಮಾಡುವುದು ಅಗತ್ಯವಾಗಿರುವುದರಿಂದ ಕನ್ಸಾಲಿಡೇಟೆಡ್ ಸ್ಯಾಲರಿ ಮಾಡಿ 900 ರೂಪಾಯಿ ಇಲ್ಲವೇ ಒಂದು ಸಾವಿರ ರೂಪಾಯಿಗಳನ್ನು ನಿಗದಿಪಡಿಸಿದರೆ

ಅನುಕೂಲವಾಗುತ್ತದೆಂದು ಕೇಳಿಕೊಂಡಿದ್ದೇನೆ. ತಾವೂ ಈ ಕುರಿತು ಮುಂದಿನ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ ಹಣ ಮೀಸಲಿಡಲು ಒತ್ತಾಯಿಸಬೇಕು. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೇ, ಇತ್ತೀಚಿನ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಲೋ ಬರ್ತ್ ವೈಟ್ ರೇಟ್ 52-53ರಷ್ಟು ಇದೆ. ಅದಕ್ಕೆ ಕಾರಣವೇನೆಂದರೆ, ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕವಾದಂತಹ ಆಹಾರ ಸಿಗುತ್ತಿಲ್ಲದಿರುವುದೇ ಆಗಿದೆ. ಇದರಿಂದ ಮೆಂಟಲ್ ಡೆವಲಪ್‌ಮೆಂಟ್ ಕೂಡ ಆಗುವುದಿಲ್ಲ ಎಂಬುದು ಎಸ್ಟಾಬ್ಲಿಷ್ಡ್ ಫ್ಯಾಕ್ಟ್. ದೇಶದ ಆರ್ಥಿಕ ಪರಿಸ್ಥಿತಿಯೇ ಇಂದು ಬದಲಾವಣೆಯಾಗಬೇಕಾಗಿದೆ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಮಕ್ಕಳು ಹುಟ್ಟಿದ ಮೇಲಾದರೂ ಕೂಡ ಅವರಿಗೆ ಪೌಷ್ಟಿಕವಾದಂತಹ ಆಹಾರವನ್ನು ನಾವು ಕೊಡಬೇಕಾದಂತಹ ಅವಶ್ಯಕತೆ ಇವತ್ತು ಇದೆ. ಹಳ್ಳಿಗಳಲ್ಲಿ ಇವತ್ತು ಹಾಲು ಯಥೇಚ್ಛವಾಗಿ ಉತ್ಪಾದನೆಯಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಂತೂ ಅದು ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯಾಗುತ್ತಿದೆ. ಎಲ್ಲೆಲ್ಲಿ ಹಾಲು ಹೆಚ್ಚಾಗಿ ಉತ್ಪಾದನೆಯಾಗುತ್ತಿದೆಯೋ ಅಂತಹ ಕಡೆಗಳಲ್ಲೆಲ್ಲಾ ಅಂಗನವಾಡಿಗಳಲ್ಲಿ ಮಕ್ಕಳಿಗೆ ಹಾಲನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ದಯವಿಟ್ಟು ಮಾಡುತ್ತಾರೆಯೇ? ಎರಡನೆಯದಾಗಿ, ಆಹಾರವನ್ನು ಸರಬರಾಜು ಮಾಡುವುದರಲ್ಲಿ ಸಾಕಷ್ಟು ಅವ್ಯವಹಾರಗಳಾಗುತ್ತಿವೆ. ಆಹಾರ ಸರಬರಾಜಿಗಾಗಿ ಟೆಂಡರ್ ಕರೆಯಲಾಗುತ್ತಿದೆ. ಅದೇನು ಟೆಂಡರ್ ಕರೆಯುತ್ತಾರೋ ಏನೋ ಗೊತ್ತಿಲ್ಲ. ನಾನು ಎಷ್ಟೇ ಪ್ರಯತ್ನಪಟ್ಟರೂ ಕೂಡ ಅದನ್ನು ಅರ್ಥ ಮಾಡಿಕೊಳ್ಳಲಿಕ್ಕೆ ನನಗೆ ಸಾಧ್ಯವಾಗಲಿಲ್ಲ. ಸಿಎಫ್‌ಟಿಆರ್‌ಐನವರು ನೀಡಿರುವ ಫಾರ್ಮುಲಾ ಪ್ರಕಾರ ಆಹಾರವನ್ನು ಸರ್ಕಾರದ್ದೇ ಸಂಸ್ಥೆಯಾದ ಆಗ್ರೊ ಕಾರ್ನ್ ಪ್ರಾಡಕ್ಟ್ಸ್ ಮೂಲಕ ಅಂಗನವಾಡಿಗಳಿಗಾಗಿಯೇ ತಯಾರಿಸಿ ಸರಬರಾಜು ಮಾಡುವುದು ಒಳ್ಳೆಯದು. ಆಹಾರ ಸರಬರಾಜಿನಲ್ಲಿ ಈಗ ಬಹಳ ದುರುಪಯೋಗವಾಗುತ್ತಿದೆ, ಅದರ ವಿವರಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಮೂಲಕವೇ ಎಕ್ಸ್‌ಕ್ಲೂಸೀವ್ ಆಗಿ ಆಹಾರವನ್ನು ತಯಾರು ಮಾಡಿಸಿ ಸರಬರಾಜು ಮಾಡುವುದಕ್ಕೆ ಸರ್ಕಾರ ಮುಂದಾಗುತ್ತದೆಯೇ?

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಮಕ್ಕಳಲ್ಲಿ ಅಪೌಷ್ಟಿಕತೆ ಬರಲಿಕ್ಕೆ ತಾಯಿ ಆರೋಗ್ಯದಿಂದ ಇಲ್ಲದೇ ಇರುವುದು ಮತ್ತು ಅವಳಿಗೆ ಪೌಷ್ಟಿಕತೆಯ ಕೊರತೆ ಇರುವುದೇ ಆಗಿದೆ. ಅದನ್ನೂ ಸಹಾ ನಾವು ಇದರಲ್ಲಿ ಕವರ್ ಮಾಡುತ್ತಿದ್ದೇವೆ. ಬಾಣಂತಿ ಮತ್ತು ಬಸುರಿಯರಿಗೂ ಸಹಾ ಈ ಒಂದು ಪೌಷ್ಟಿಕ ಆಹಾರವನ್ನು ನೀಡುವಂತಹ ಒಂದು ಕಾರ್ಯಕ್ರಮ ಇದೆ. ಮಕ್ಕಳ ಸಂಖ್ಯೆಯ ಜೊತೆಗೆ, ಇಷ್ಟು ಜನ ಹೆಣ್ಣುಮಕ್ಕಳು ಬಾಣಂತಿಯರು ಇದ್ದಾರೆ, ಇಷ್ಟು ಜನ ಹೆಣ್ಣು ಮಕ್ಕಳು ಗರ್ಭಿಣಿಯರಿದ್ದಾರೆ ಎಂದು ಅಟೆಂಡೆನ್ಸ್ ಷೀಟ್‌ನಲ್ಲಿ ಹೆಸರುಗಳಿರುತ್ತವೆ. ಎಷ್ಟೋ ಜನ ಹೆಣ್ಣು ಮಕ್ಕಳು ಮಧ್ಯಾಹ್ನ

ಊಟ ಕೊಡುವ ಟೈಮಿಗೆ ಬರುವುದಿಲ್ಲ. ಇವರು ತೆಗೆದುಕೊಂಡು ಹೋಗಿ ಆ ತಾಯಿಂದಿರಿಗೆ ಕೊಡುವುದೂ ಇಲ್ಲ. ಅದಕ್ಕಾಗಿ ನಾನು ಈ ಸಾರಿ, ಆ ಹೆಣ್ಣು ಮಕ್ಕಳಿಗೆ ಒಂದು ವಾರಕ್ಕೆ ಎಷ್ಟು ಈ ರೀತಿ ಪೌಷ್ಟಿಕ ಆಹಾರವನ್ನು ಕೊಡಬೇಕೋ ಅದನ್ನು ತಾಯಿಂದಿರಿಗೆ ಒಂದು ವಾರಕ್ಕೆ ಅಥವಾ ತಿಂಗಳಿಗೆ ಅಥವಾ 15 ದಿನಗಳ ಲೆಕ್ಕದಲ್ಲಿ ನೀವು ಕೊಡಬೇಕು ಎಂದು ನಾನು ಹೇಳಿದ್ದೇನೆ. ಅವರು ವಾರದ ಯಾವ ದಿನ ಅವರಿಗೆ ಬಿಡುವು ಆಗಿರುತ್ತದೋ ಆ ದಿನ ಬಂದು ಅವರು ಇದನ್ನು ಪಡೆದುಕೊಂಡು ಹೋಗಬೇಕು ಎಂದು ಮಾಡಿದ್ದೇನೆ. ಇದು ಮೊದಲಿನಿಂದಲೂ ಇದೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ ದುರ್ಬಲ ವರ್ಗದ ಬಾಣಂತಿಯರು ಮತ್ತು ಗರ್ಭಿಣಿಯರಿಗೆ ಫುಡ್ ಸಪ್ಲೈ ಮಾಡಬೇಕೆಂದು ಇದೆ. ನೀವು ಒಂದು ಸಾರಿ ಯಾವುದಾದರೂ ಅಂಗನವಾಡಿಯ ಅಟೆಂಡೆನ್ಸ್ ರಿಜಿಸ್ಟರ್ ತೆಗೆದು ನೋಡಿ. ಅದರಲ್ಲಿ ಮಕ್ಕಳು ಇಷ್ಟು, ತಾಯಿಂದಿರು ಇಷ್ಟು ಎಂಬ ವಿವರ ಇರುತ್ತದೆ. ಆದರೆ ನಿಜವಾಗಿಯೂ ಕೂಡ ಆ ತಾಯಿಂದಿರು ಯಾರೂ ಇದನ್ನು ಉಪಯೋಗಿಸುತ್ತಿಲ್ಲ. ಮಕ್ಕಳು ಒಂದು ಟಿಫನ್ ಬಾಕ್ಸ್ ತರುತ್ತಾರಂತೆ, ಅವರು ತಿನ್ನುವುದರ ಜೊತೆಗೆ ಅದರಲ್ಲಿ ಒಂದಷ್ಟು ಹಾಕಿ ಕಳುಹಿಸುವುದು ನಡೆಯುತ್ತಿದೆ. ಅವರು ಅವರ ತಾಯಿಂದಿರಿಗೆ ಅದನ್ನು ಕೊಡುವುದೂ ಇಲ್ಲ. ತಾಯಿಂದಿರು ಅದನ್ನು ತಿನ್ನುವುದೂ ಇಲ್ಲ. ಆದ್ದರಿಂದ ನಾವು ಪ್ರತಿದಿನ ನಾವು ಕೊಡುವ ಫುಡ್ ವಾರಕ್ಕೆ ಎಷ್ಟು ಬರುತ್ತದೋ ಅದನ್ನು ಒಟ್ಟಿಗೇ ತಾಯಿಂದಿರು ವಾರಕ್ಕೊಮ್ಮೆ ಕಲೆಕ್ಟ್ ಮಾಡಿಕೊಳ್ಳಲಿಕ್ಕೆ ವ್ಯವಸ್ಥೆ ಮಾಡಿದ್ದೇವೆ. ತಾವುಗಳೂ ಸಹ ಅಂಗನವಾಡಿಗಳ ಬಗ್ಗೆ ಸ್ವಲ್ಪ ಗಮನ ಹರಿಸಿದರೆ ಯಾವುದೂ ಮಿಸ್‌ಯೂಸ್ ಆಗಲಿಕ್ಕೆ ಸಾಧ್ಯವಿಲ್ಲ. ಹಾಲನ್ನು ಸರಬರಾಜು ಮಾಡುವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ನಿಜಕ್ಕೂ ಅದು ತುಂಬಾ ಒಳ್ಳೆಯ ಸಲಹೆ. ಮಾನ್ಯ ಮಂತ್ರಿಗಳ ಕಡೆಯಿಂದ ಕೂಡ ಅವರು ಪ್ಯಾಕೆಟ್ ಹಾಲನ್ನು ಸರಬರಾಜು ಮಾಡುವ ಬಗ್ಗೆ ಬೇಡಿಕೆ ಬಂದಿದೆ. ಲೂಸ್ ಹಾಲು ತೆಗೆದುಕೊಂಡು ಹೋಗಿ ಮತ್ತೆ ಅದನ್ನು ಕಾಯಿಸುವುದು ಬಹಳ ತಾಪತ್ರಯದ ವಿಚಾರ. ಪಾತ್ರೆ ಸರಿಯಾಗಿ ತೊಳೆಯದೇ ಇರುವುದು, ಅದರೊಳಗೆ ಹಲ್ಲಿ ಅಥವಾ ಬೇರೆ ಏನಾದರೂ ಬಿದ್ದು ಫುಡ್ ಪಾಯಿಸನ್ ಆಗುವ ಸಂಭವ ಕೂಡ ಇದೆ. ನಮ್ಮ ಬಳಿ ಇರುವ ಫಂಡಿಗೆ ಅನುಗುಣವಾಗಿ ನಮ್ಮ ರೇಟ್‌ಗೆ ತಕ್ಕ ಹಾಗೆ ಹಾಲನ್ನು ಸಪ್ಲೈ ಮಾಡುವುದಾದರೆ, ಹಾಲನ್ನು ನಾವು ತೆಗೆದುಕೊಳ್ಳಲಿಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ನಾನು ಇಚ್ಛಿಪಡುತ್ತೇನೆ. ಅಂಗನವಾಡಿ ಸಲಹಾ ಸಮಿತಿ ಎಂದು ಎಲ್ಲಾ ಕ್ಷೇತ್ರಗಳಲ್ಲೂ ರಚಿಸಲಿಕ್ಕೆ ಹೇಳಿದ್ದೇವೆ. ಅವರಿಗೆ ನೀವು ಸ್ವಲ್ಪ ಕೆಲಸ ಕೊಡಿ. ಅವರು ಆಗಾಗ ಹೋಗಿ ಚೆಕ್ ಮಾಡಲಿ. ಫುಡ್ ಎಷ್ಟು ಬರುತ್ತದೆ? ಫುಡ್ ಅಲ್ಲಿ ಇಳಿಸಿದ್ದಾರಾ? ಎಷ್ಟು ಚೀಲ ಅಕ್ಕಿ ಬಂತು ಎಂಬ ವಿಚಾರಗಳನ್ನು ಸಲಹಾ ಸಮಿತಿಯವರು ನೋಡಿಕೊಂಡರೆ ಒಳ್ಳೆಯದು. ಅದರ ಬಗ್ಗೆ ಮಾನ್ಯ ಶಾಸಕರು ಗೈಡ್ ಮಾಡಿದರೆ ಸಲಹಾ ಸಮಿತಿಯವರು ವಾಚ್ ಅಂಡ್ ವಾರ್ಡ್‌ನಂತೆ ಕಾರ್ಯನಿರ್ವಹಿಸಿದರೆ ಈ ಅವ್ಯವಹಾರ ನಿಲ್ಲಲಿಕ್ಕೆ ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಈಗ ಎನರ್ಜಿ ಫುಡ್ ಅನ್ನು ಆಗ್ರೋ ಕಾರ್ನ್‌ರವರೇ ಸಪ್ಲೈ ಮಾಡುತ್ತಿದ್ದಾರೆ.

ಶ್ರೀ ಸಿ.ಬೈರೇಗೌಡ: ಒಂದು ವಿಧದ ಎನರ್ಜಿ ಫುಡ್ ಅನ್ನು ಮಾತ್ರ ಅವರು ಸಪ್ಲೈ ಮಾಡುತ್ತಿದ್ದಾರೆ. ಆದರೆ ಎಲ್ಲಾ ರೀತಿಯ ಫುಡ್ ಅನ್ನು ಆಗ್ರೋ ಕಾರ್ನ್‌ನಲ್ಲೇ ತಯಾರಿಸಲು ವ್ಯವಸ್ಥೆ ಮಾಡಬೇಕು. ಸರ್ಕಾರದ ಸಂಸ್ಥೆಯಾದ ಅದು ಲಾಭದಲ್ಲಿ ನಡೆಯುವಂತೆ ಮಾಡಬೇಕಾಗುತ್ತದೆ. ಸಿಎಫ್‌ಟಿಆರ್‌ಐ ಫಾರ್ಮುಲಾ ಪ್ರಕಾರ ಎಲ್ಲಾ ರೀತಿಯಾದಂತಹ ಫುಡ್ ಅನ್ನು ಎಕ್ಸ್‌ಕ್ಲೂಸೀವ್ ಆಗಿ ತಯಾರಿಸಿ ಸಪ್ಲೈ ಮಾಡಲಿಕ್ಕೆ ತಾವು ಆಗ್ರೋ ಕಾರ್ನ್‌ಗೆ ನಿರ್ದೇಶನ ನೀಡಿ.

ಶ್ರೀಮತಿ ಮೋಟಮ್ಮ: ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಬಿ.ಆರ್.ನೀಲಕಂಠಪ್ಪ(ತರೀಕೆರೆ): ಮಾನ್ಯ ಅಧ್ಯಕ್ಷರೇ, ಈಗ ತಾನೇ ಪೌಷ್ಟಿಕ ಆಹಾರದ ಬಗ್ಗೆ ಮಾನ್ಯ ಸಚಿವರು ಉತ್ತಮವಾಗಿ ಮಾತನಾಡಿದರು. ಕೆಲವರು ಮಕ್ಕಳಿಗೆ ಮೊಟ್ಟೆ ಕೊಡಿ ಎಂದರೆ ಮತ್ತೆ ಕೆಲವರು ಮೀನು ಕೊಡಿ ಎನ್ನುತ್ತಿದ್ದಾರೆ. ಸಸ್ಯಾಹಾರಿಗಳಾದ ನಮ್ಮ ಮಕ್ಕಳು ಅಂಗನವಾಡಿಯಲ್ಲಿ ಮೊಟ್ಟೆ ತಿಂದು ಮನೆಗೆ ಬಂದು ನಮಗೆ ಕೋಳಿ ಕೊಡು ಎನ್ನುತ್ತವೆ. ಈ ಪರಿಸ್ಥಿತಿ ಬರಬಾರದು. ನಮ್ಮ ಕಷ್ಟವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಸಸ್ಯಾಹಾರಿಗಳಾದ ಲಿಂಗಾಯಿತರು ಮತ್ತು ಬ್ರಾಹ್ಮಣರು ಇತರ ಜಾತಿಗಳ ಮಕ್ಕಳಿಗೆ ಮೊಟ್ಟೆ ಕೊಡುವುದರಿಂದ ತೊಂದರೆಯಾಗುತ್ತದೆ. ಹಾಲು ಕೊಡುವುದು ಒಳ್ಳೆಯದು, ಅದನ್ನು ನಾವೂ ಸಹ ಒಪ್ಪಿಕೊಳ್ಳುತ್ತೇವೆ. ಎಲ್ಲಾ ಮಕ್ಕಳೂ ತಿನ್ನುವಂತಹ ಪೌಷ್ಟಿಕ ಆಹಾರವನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕು.

ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೇ, ಇವರುಗಳು ಮಕ್ಕಳಿಗೆ ಮತ್ತು ಹೆಂಡತಿಗೆ ಗೊತ್ತಿಲ್ಲದಂತೆ ಕೋಳಿ ಮತ್ತಿತರ ಮಾಂಸಾಹಾರಿ ಆಹಾರ ತಿಂದು ಹೋಗಬಹುದು. ಹೀಗಿರುವಾಗ ಮಕ್ಕಳು ಮೊಟ್ಟೆ ತಿಂದರೆ ತಪ್ಪು ಹೇಗಾಗುತ್ತದೆ? ಅವರು ಅದನ್ನು ತಿನ್ನಲಿ ಬಿಡಿ.

ಶ್ರೀ ಎ.ಆರ್.ಕೃಷ್ಣಮೂರ್ತಿ(ಸಂತೇಮಾರನಹಳ್ಳಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಪೌಷ್ಟಿಕ ಆಹಾರದ ಬಗ್ಗೆ ಪ್ರಸ್ತಾಪ ಮಾಡಿರುವುದು ತುಂಬಾ ಸ್ವಾಗತಾರ್ಹ. ನಮ್ಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಈಗ ಅಂಗನವಾಡಿಗಳಿಗೆ ಪೌಷ್ಟಿಕಾಂಶದ ಆಹಾರವನ್ನು ಸರಬರಾಜು ಮಾಡುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತರು ಇದರ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವಂತಹ ವಿಚಾರ ಒಂದು ಕಡೆ ಇರಬಹುದು. ಅಂಗನವಾಡಿಗಳಿಗೆ ಸರ್ಕಾರದಿಂದ ಜಿಲ್ಲಾಪಾರು ಜನರಲ್ ಫೂಲ್ ಅಮೌಂಟ್‌ನಲ್ಲಿ ಪೌಷ್ಟಿಕಾಂಶ ಆಹಾರ ಸರಬರಾಜಿಗಾಗಿ ಹಣ ಬಿಡುಗಡೆಯಾಗುತ್ತಿದೆ. ಎಸ್‌ಸಿಪಿ : ಟಿಎಸ್‌ಪಿ ಅಮೌಂಟ್‌ನಲ್ಲೂ ಕೂಡ ಪೌಷ್ಟಿಕಾಂಶ ಆಹಾರ ಸರಬರಾಜಿಗಾಗಿ ಹಣ ಬಿಡುಗಡೆಯಾಗುತ್ತದೆ. ಈ ರೀತಿಯಾಗಿ ಎರಡು ವಿಧದಲ್ಲಿ ಈ ಬಾಬಿಗಾಗಿ ಹಣ ಬಿಡುಗಡೆಯಾಗುತ್ತಿದೆ. ಇದು ಬಹಳಷ್ಟು ದುರುಪಯೋಗವಾಗುತ್ತಿದೆ. ಅಂಗನವಾಡಿಗಳಲ್ಲಿ ಪ್ರಾಕ್ಟಿಕಲ್ಲಾಗಿ ನಾವು ನೋಡಿದಾಗ ಎಸ್‌ಸಿಪಿ

: ಟಿಎಸ್‌ಪಿ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಪೌಷ್ಟಿಕಾಂಶದ ಆಹಾರ ಸರಬರಾಜು ಮಾಡದೇ ಇರುವುದು ಕಂಡು ಬರುತ್ತದೆ. ಇದು ಎಲ್ಲಾ ಕಡೆಯೂ ಕೂಡ ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಭಾಷಣ ಮಾಡಬೇಡಿ, ನೀವು ಎರಡನೇ ಸಾರಿ ಆಯ್ಕೆಯಾಗಿ ಬಂದಿದ್ದೀರಿ, ಭಾಷಣ ಮಾಡುತ್ತಿದ್ದೀರಿ.

ಶ್ರೀಮತಿ ಮೋಟಮ್ಮ: ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು, ಎಲ್ಲಾ ಇಲಾಖೆಗಳಲ್ಲೂ 18 ಪರ್ಸೆಂಟ್ ಅಮೌಂಟ್ ಎಸ್‌ಸಿ/ಎಸ್‌ಟಿಯವರಿಗೆ ಖರ್ಚು ಮಾಡಬೇಕೆಂದು ಇದೆ. ಹಾಗೆಯೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಕೂಡ ಪೌಷ್ಟಿಕ ಆಹಾರ ಸರಬರಾಜು ಮಾಡುವುದಕ್ಕೆ 18 ಪರ್ಸೆಂಟ್ ಮೊತ್ತ ಬರುತ್ತಿದೆಯಾ? ಟೋಟಲ್ ಅಲೋಕೇಷನ್ ಜೊತೆಗೆ 18 ಪರ್ಸೆಂಟ್ ಅಮೌಂಟ್ ಬರುತ್ತಿದೆಯಾ ಎಂದು ಕೇಳುತ್ತಿದ್ದಾರೆ,

ಶ್ರೀ ಎ.ಆರ್.ಕೃಷ್ಣಮೂರ್ತಿ: ಎಸ್‌ಸಿಪಿ ಮತ್ತು ಟಿಎಸ್‌ಪಿ ಅಮೌಂಟ್ ಎಲ್ಲೂ ಕೂಡ ವಿನಿಯೋಗವಾಗುತ್ತಿಲ್ಲ. ಇದರ ಹೆಡ್ ಆಫ್ ಅಕೌಂಟ್ ಬೇರೆ ಇರುತ್ತದೆ. ಅಧಿಕಾರಿಗಳು ಏನು ಮಾಡುತ್ತಾರೆ ಒಟ್ಟಾರೆ ಅದನ್ನು ಕ್ಲಬ್ ಮಾಡಿ ಪೌಷ್ಟಿಕ ಆಹಾರಗಳ ಸರಬರಾಜಿನ ಅಡಿಯಲ್ಲಿ ಕೊಡುತ್ತಿದ್ದಾರೆ. ಒಂದು ತಾಲ್ಲೂಕಿಗೆ 17-20 ಲಕ್ಷ ರೂಪಾಯಿ ಡಿಸಿಪಿ ಕಾರ್ಯಕ್ರಮಕ್ಕೆ ಬಂದರೆ 125 ತಾಲ್ಲೂಕುಗಳಿಗೆ ಎಷ್ಟಾಯಿತು?

ಅಧ್ಯಕ್ಷರು: ಪ್ರಶ್ನೋತ್ತರ ಅವಧಿ ಇಲ್ಲಿಗೆ ಮುಗಿಯಿತು.